O.S.No.:373/2018
P.W.:1

ಈ ದಿನ ದಿಃ05.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಆರ್.ಸಿ ವಕೀಲರಿಂದಃ**

ಈ ದಾವೆಯನ್ನು ನಾನು ದೀಲಿಪ್ ಇವರ ವಿರುದ್ಧ ದಾಖಲಿಸಿರುತ್ತೇನೆ. ಜಮೀನಿಗೆ ತಕರಾರು ಮಾಡಿದ್ದರಿಂದ ಈ ದಾವೆ ಸಲ್ಲಿಸಿರುತ್ತೇನೆ. ದಾವಾಸರ್ವೆ ನಂ.211/3 ರಲ್ಲಿ 1 ಎಕರೆ 14 ಗುಂಟೆ ಜಮೀನಿಗೆ ಸಂಬಂಧಿಸಿರುತ್ತದೆ. ದಾವಾಸ್ವತ್ತಿನ ದಕ್ಷಿಣಕ್ಕೆ ಪ್ರತಿವಾದಿಯ ಜಮೀನು ಬರುತ್ತದೆ. ದಾವೆಯ ವಾದಪತ್ರದಲ್ಲಿ ಅನುಸೂಚಿಯಲ್ಲಿ ದಾವಾಸ್ವತ್ತಿನ ಚಕ್ಕುಬಂದಿಯಲ್ಲಿ ದಕ್ಷಿಣಕ್ಕೆ ದೀಲಿಪ್ ಇವರ ಜಮೀನು ಎಂದು ಹೇಳಿರುವುದಿಲ್ಲ.

ಸರ್ಕಾರದವರು ನನ್ನ ಮತ್ತು ಪ್ರತಿವಾದಿಯ ಜಮೀನನ್ನು ಅಳತೆ ಮಾಡಿ ಹದ್ದುಬಸ್ತನ್ನು ಗುರುತಿಸಿ ನಕ್ಷೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಪೂರ್ವಕ್ಕೆ ಪ್ರತಿವಾದಿಯ ತಂದೆ ನಾಗರಾಜು ಇವರ ಹೆಸರಿನಲ್ಲಿರುವ ಜಮೀನು ಇದೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಪೂರ್ವಕ್ಕೆ ಪ್ರತಿವಾದಿಯ ತಂದೆ ನಾಗರಾಜು ಇವರಿಗೆ ಸೇರಿದ ಸ್ವತ್ತಿನ ಪೂರ್ವಕ್ಕೆ ದಾವೆಯಲ್ಲಿ ತೋರಿಸಿರುವ ಶಿವಣ್ಣ ಬಿನ್ ಚನ್ನಮಲ್ಲಯ್ಯ ಇವರ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಜಮೀನಿಗೆ ಹೊಂದಿಕೊಂಡಂತೆ ಶಿವಣ್ಣ ಇವರ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ತಂದೆ ನಾಗರಾಜು ಇವರ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಚಕ್ಕುಬಂದಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

ಅಂದಾಜು ಮೂರು ವರ್ಷಗಳ ಹಿಂದೆ ಕರೋಣ ಸಂದರ್ಭದಲ್ಲಿ ಪ್ರತಿವಾದಿ ನನ್ನ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಜಮೀನಿನಲ್ಲಿ ಬೆಳೆದ ಬೆಳೆಯನ್ನು ನಾಶ ಪಡಿಸಿರುತ್ತಾರೆಂದು ನುಡಿಯುತ್ತಾರೆ. ಪೊಲೀಸರಿಗೆ ದೂರು ನೀಡಿದ ದಿನಾಂಕ

ತಿಂಗಳು ಮತ್ತು ವರ್ಷ ಹೇಳಲು ಬರುವುದಿಲ್ಲ. ಈ ದಾವೆಯನ್ನು ಕರೋನಾ ಬರುವ ಮೊದಲೇ ದಾಖಲಿಸಿದ್ದೆನು. ಪ್ರತಿವಾದಿ ನನ್ನ ದಾವಾಜಮೀನಿಗೆ ತೊಂದರೆ ನೀಡಿದ ದಿನಾಂಕ ತಿಂಗಳು ಮತ್ತು ವರ್ಷ ಹೇಳಲು ಬರುವುದಿಲ್ಲ.

ದಾವಾಸ್ವತ್ತಿನಲ್ಲಿ ನಾನು ಸ್ವಾಧೀನಾದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಜಮೀನಿನ ಪೂರ್ವಕ್ಕೆ ಪ್ರತಿವಾದಿಯ ತಂದೆ ನಾಗರಾಜು ಇವರಿಗೆ ಸೇರಿದ ಸರ್ವೆ ನಂ.597 ಜಮೀನು ಇದೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಪೂರ್ವಕ್ಕೆ ನಾಗರಾಜು ಇವರ ಜಮೀನು ಇದೆ ಎಂದು ಸರ್ವೆ ದಾಖಲೆಗಳಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ಕಾಲಕ್ಕೆ ನಮಗೆ ನೋಟಿಸ್ ನೀಡಲಾಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ತೊಂದರೆ ನೀಡುತ್ತಿದ್ದಾರೆಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 1 ಎಕರೆ 14 ಗುಂಟೆ ಜಮೀನಿನ ಸ್ವಾಧೀನದಲ್ಲಿರುತ್ತೇನೆ. ನಾನು ಜಮೀನನ್ನು ಸರ್ವೆ ಇಲಾಖೆಯಿಂದ ಅಳತೆ ಮಾಡಿಸಲು ನನ್ನದು ಯಾವುದೇ ತಕರಾರು ಇರುವುದಿಲ್ಲ. ನನಗೆ ಸೇರಿದ 1 ಎಕರೆ 14 ಗುಂಟೆ ಜಮೀನು ಹೊರತುಪಡಿಸಿ ಹೆಚ್ಚಿಗೆ ಜಮೀನು ಇದ್ದಲ್ಲಿ ತೆಗೆದುಕೊಳ್ಳಿ ಎಂದು ನುಡಿಯುತ್ತಾರೆ. ಸುಳ್ಳು ಚಕ್ಕುಬಂದಿ ಸಲ್ಲಿಸಿ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರದ ಮೂಲಕ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.

O.S.No.:373/2018
P.W.:1